ಮುಳುಗಿದ್ದಾಗ ಸರಿಯಾಗಿ ಒಂದು ಕಾರು ತಕ್ಷಣ ಬ್ರೇಕ್ ಹಾಕಿದ ರಭಸದ ಶಬ್ದಕ್ಕೆ ಕಿರುಗುಟ್ಟಿತು. ಒಂದು ಬಿಳಿಯ ತಲೆ ಕಾರಿನ ಕಿಟಕಿಯಿಂದ ಹೊರ ಚಾಚಿತು.

"ಏ... ಎಲ್ಲಿ ನೋಡ್ಕೊಂಡು ಹೋಗ್ತಾ ಇದ್ದಿಯೋ, ಕರಿ ಸೂಳೆಮಗನೇ!"

ಕಾರ್ಲಿ ಅವನ ಕಡೆ ಅವಾಕ್ಕಾಗಿ ನೋಡಿದ. ಖಂಡಿತ, ಈ ಬಿಳಿಯ, ಆ ಭಾಷಣಕಾರರು ಆಡಿದ ಮಾತುಗಳನ್ನು ಈ ಬಿಳಿಯ ಕೇಳಿರಲಿಕ್ಕಿಲ್ಲ. ಆ ಬಿಳಿ ಹೆಂಗಸು, ನೆಕ್‌ಸ್ಲಿಗೆ ಸಿಗರೇಟು ನೀಡುತ್ತಿದ್ದುದನ್ನು ಗಮನಿಸಿರಲಾರ. ಆ ಬಿಳಿಹೆಂಗಸು ತನ್ನಕಡೆ ಆ ರೀತಿ ಅರಚುತ್ತಿರುವುದನ್ನು ಊಹಿಸಲೂ ಸಾಧ್ಯವಿಲ್ಲ. ಸರಿ, ತಾನೊಂದು ರೈಲು ಹಿಡಿದು ಹೊರಟು, ಇವುಗಳ ಬಗ್ಗೆ ನಂತರ ಆಲೋಚಿಸಬಹುದು ಎಂದುಕೊಂಡ.

ಅವನು ಈಗ ನಿಲ್ದಾಣವನ್ನು ಹೊಸಬೆಳಕಿನಲ್ಲಿ ನೋಡಿದ. ಇಲ್ಲ ಂತೂ ದಟ್ಟ ಜನಸಂದಣಿ, ಕರಿಯರು, ಬಿಳಿಯರು ಹಾಗೂ ತನ್ನಂತೆ ಕಂದು ಬಣ್ಣದವರು ಎಲ್ಲಾ ಇದ್ದರು. ಈ ಸ್ಥಳದಲ್ಲಿ ಅವರೆಲ್ಲಾ ಪರಸ್ಪರ ಬೆರೆತಿದ್ದರು. ಆದರೆ, ಯಾರೊಬ್ಬರಿಗೂ ಮತ್ತೊಬ್ಬರ ಮೇಲೆ ವಿಶ್ವಾಸ ಇರಲಿಲ್ಲ. ಮತ್ತೊಬ್ಬರು ಸಂಶಯದಿಂದಲೇ ನೋಡುತ್ತಿದ್ದರು ಅಸಾಧಾರಣ ಭಯದಿಂದ, ತನ್ನದೇ ಆದ ಸಂಕುಚಿತ ರೀತಿಯಲ್ಲಿ, ಕಾಡುವ ರೀತಿನೀತಿಗಳಿಂದ. ಇವುಗಳೆಲ್ಲವನ್ನೂ ಯಾರಾದರೂ ಸವಾಲಾಗಿ ಎದುರಿಸಬೇಕು ಎಂದು ಭಾಷಣಕಾರ ಹೇಳಿದ್ದ... ತಮ್ಮದೇ ಆದ ರೀತಿಯಲ್ಲಿ. ಆದರೆ, ತನ್ನದೇ ರೀತಿಯಲ್ಲಿ ಎಂದರೆ ಹೇಗೆ? ಸವಾಲಾಗಿ ಸ್ವೀಕರಿಸುವುದು ಎಂದರೆ ಹೇಗೆ? ತಕ್ಷಣ ಅದು ಅವನಿಗೆ ಹೊಳೆಯಿತು. ಆ ಸವಾಲು ಈಗ ಉದ್ಭವವಾಗಿತ್ತು! ಆಗ ಕಣ್ಣಿಗೆ ಬಿದ್ದಿದ್ದು ಈ ಬೆಂಚು, ಯೂರೋಪಿಯನ್ನರಿಗೆ ಮಾತ್ರ ಎಂದು ದಪ್ಪಕ್ಷರಗಳಲ್ಲಿ ಬಿಳಿಬಣ್ಣದಲ್ಲಿ ಬರೆಯಲಾಗಿದ್ದಂತಹ ಬೆಂಚು. ಒಂದು ಕ್ಷಣ ಅದು ದಕ್ಷಿಣ ಆಫ್ರಿಕಾ ಸಮಾಜದ ಬಹುತ್ವದ ವೇದನೆಯನ್ನು ಸಂಕೇತಿಸುತ್ತಿತ್ತು.

ಮನುಷ್ಯನ ಹಕ್ಕುಗಳಿಗೆ ಸವಾಲಾಗುವ ಸ್ಥಳ ಇಲ್ಲಿತ್ತು. ಇಲ್ಲಿಯೇ ಅದು ಕಾಣಿಸುತ್ತಿತ್ತು. ಒಂದು ಪರಿಪೂರ್ಣವಾದ ಮರದ ಸಾಧಾರಣ ರೈಲ್ವೆ ಬೆಂಚು, ದಕ್ಷಿಣ ಆಫ್ರಿಕಾದ ಎಷ್ಟೋ ಕಡೆ ಕಂಡು ಬರುತ್ತಿದ್ದ ಬೆಂಚು. ಈಗ ಅದು ಅವನ ಸವಾಲು. ಆ ಬೆಂಚು ತನಗೆ ಅರ್ಥವಾಗದ ವ್ಯವಸ್ಥೆಯ ಕೆಡಕುಗಳನ್ನು ಕೇಂದ್ರೀಕರಿಸಿಕೊಂಡಂತಹ ಬೆಂಚು. ಅದಕ್ಕೆ ಅವನು ಬಲಿಯಾಗುವ ಸಮಯ ಬಂತು. ಅದು ತನ್ನ ಹಾಗೂ ಮಾನವಕುಲದ ನಡುವೆ ಬಂದಂತಹ ಒಂದು ಅಡೆತಡೆ. ಅದರ ಮೇಲೆ ತಾನು ಕುಳಿತುಕೊಂಡರೆ ಅವನೊಬ್ಬ ಮನುಷ್ಯನಾಗುತ್ತಿದ್ದ. ಅದಕ್ಕೆ ಅವನು ಭಯಪಟ್ಟರೆ, ಮಾನವ ಸಮಾಜದ ಮಾನವ ಸದಸ್ಯತ್ವವನ್ನೇ ನಿರಾಕರಿಸಿದಂತಾಗುತ್ತಿತ್ತು. ಅವನಿಗೆ ಹೆಚ್ಚು ಕಡಿಮೆ ಈ ಅಪಾಯಕಾರಿ ಪದ್ಧತಿಯನ್ನು ಸರಿಪಡಿಸುವ ಮುಂಗಾಣ್ಕೆ ಇತ್ತು, ಅವನು ಆ ಬೆಂಚಿನ ಮೇಲೆ ಕುಳಿತು ಕೊಳ್ಳುವುದಿದ್ದರೆ ಮಾತ್ರ. ಆ ಸದವಕಾಶ ಇಲ್ಲಿತ್ತು. ಅವನು, ಕಾರ್ಲಿ ಅದನ್ನು ಸವಾಲಾಗಿಸಬೇಕಾಗಿತ್ತು.

ತಾನು ಆ ಬೆಂಚಿನ ಮೇಲೆ ಕುಳಿತುಕೊಂಡಾಗ ಪರಿಪೂರ್ಣವಾದ ಶಾಂತತೆಯಲ್ಲಿದ್ದ, ಆದರೆ ಅವನ ಒಳಗಡೆ ಹೃದಯ ಬಡಿದುಕೊಳ್ಳುತ್ತಿತ್ತು. ಎರಡು ಸಂಘರ್ಷಕರ ವಿಚಾರಗಳು ಅವನಲ್ಲಿ ಹಾದು ಹೋದವು. ಒಂದು ಹೇಳಿತು, "ಈ ಬೆಂಚಿನ ಮೇಲೆ ಕುಳಿತು ಕೊಳ್ಳಲು ನನಗೆ ಯಾವುದೇ ಹಕ್ಕಿಲ್ಲ" ಮತ್ತೊಂದು ಹೊಸ ಧರ್ಮದ ಧ್ವನಿ ಹೇಳಿತು, "ಈ ಬೆಂಚಿನ ಮೇಲೆ ಕುಳಿತುಕೊಳ್ಳುವ ಹಕ್ಕು ನನಗೇಕಿಲ್ಲ?" ಒಂದು ಧ್ವನಿ ಭೂತಕಾಲದ ಬಗ್ಗೆ, ಅವನು ಮನನೊಂದಿದ್ದ ಗುಲಾಮಿ ಭಾವನೆ ಬಗ್ಗೆ, ತನ್ನ ತಂದೆ, ತಂದೆಯ ತಂದೆ ಕರಿಯರಾಗಿ ಹುಟ್ಟಿ, ಕರಿಯರಾಗಿ ಬದುಕಿ ಕೊನೆಗೆ ಹೇಸರಗತ್ತೆಗಳಂತೆ ಸತ್ತ ರೀತಿಯ ಬಗ್ಗೆ, ಮತ್ತೊಂದು ಧ್ವನಿ, ಹೊಸ ದಿಗಂತಗಳನ್ನು ಕಾಣಿಸುವಂತೆ ಹೇಳಿತು, "ಕಾರ್ಲಿ, ನೀನೊಬ್ಬ ಮನುಷ್ಯ. ನಿನ್ನ ತಂದೆ, ಅವರ ತಂದೆಯ ತಂದೆ, ಇವರು ಯಾರೂ ಮಾಡಲಾಗದ್ದನ್ನು, ನೀನು ಮಾಡಲು ಹೊರಟಿರುವೆ. ನೀನೀಗ ಮನುಷ್ಯನಂತೆಯೇ ಸಾಯುತ್ತೀಯೆ".